


**ಎಡದಿಂದ ಬಲಕ್ಕೆ :**

1. ದೇವಸ್ಥಾನಕ್ಕೆ ನೀಡಿದ್ದೆಲ್ಲ ವಿಧ ವಿಧ ಕಾಳು ಕಡ್ಡಿ (3)
3. ಪರಿಣಾಮ ಏನೇ ಬರಲಿ, ಮೊದಲು ಸಾಷ್ಟಾಂಗ ವಂದನೆ (3)
4. ಶೋಧ ಕಾರ್ಯ ಆರಂಭಗೊಂಡು ಆಯಿತು ಹತ್ತು ವರ್ಷ (3)
6. ಮನವಿಯನ್ನು ಸಲ್ಲಿಸುವ ಮುನ್ನ ನಮಸ್ಕಾರ (3)
7. ಅಪ್ಪನಿಂದ ಪಡೆದದ್ದು ಕಷ್ಟದ ಕಾಲಕ್ಕೆಂದು ಇಟ್ಟಿದ್ದ ದುಡ್ಡು (4)
9. ಕರಾಳ ದಂಧೆಗಳನ್ನು ನಡೆಸಿ ಸಂಗ್ರಹಿಸಿದ್ದು ಬರೀ ಕಪ್ಪು ಹಣ (4)
11. ಸಕಲ ಜನರ ಕಲ್ಪನೆಯಲ್ಲೂ ಇರುವ 'ದೇವತಾ ಪ್ರಪಂಚ' (4)
13. ಪ್ರಾರಂಭಿಕ ಕಾರ್ಯಕ್ಕೇ ಅಡ್ಡಿ ಮಾಡಿದವ ನಮ್ಮವನಲ್ಲ (4)
15. ನಿರ್ಮಲ ಮನಸ್ಸಿನ ಹೂವಾಡಗಿತ್ತಿ ಗೊತ್ತೇ ? (3)
17. ಸೀರೆ ನೇಯುವ ಕಾರ್ಯಕ್ಕೆ ಒಲ್ಲೆನೆಂದ (3)
18. ಕೂಲಂಕಷವಾಗಿ ಗಮನಿಸಿದರೆ ಬರೀ ಕೊಳಕು (3)
19. ಕಾಟ ಕೊಟ್ಟವರಿಗೆ ಸಿಕ್ಕ ಶಿಕ್ಷೆ ತುಂಬ ಉಗ್ರ (3)

**ಮೇಲಿಂದ ಕೆಳಕ್ಕೆ :**

1. ಮುಂದೆ ನಿಂತವನ ಧ್ವನಿಯನ್ನೇ ಅಡಗಿಸಿದರೇ ? (3)
2. ದಾಸಯ್ಯನಿಗೂ ವಾಸಿಸಲು ಮನೆ ಬೇಕು ತಾನೇ ? (3)
3. ದುಷ್ಟ ಪ್ರಭಾವಗಳಿಂದ ದೂರ ಇರುವ ಬುದ್ಧಿ ಅವನಿಗಿದೆ (3)
5. ಖಳ ನಾಯಕರ ನಡುವಣ ಹೊಡೆದಾಟ ಅದೆಷ್ಟು ಭಯಂಕರ! (3)
7. ಪ್ರಬಲ ಆಧಾರ ಒದಗಿಸಿದವರನ್ನು ಮೊದಲು ಸತ್ಕರಿಸು (4)
8. ಪುಳಕಗೊಳಿಸುವಂತಿದೆ ಆತನ ರುಚಿ ರುಚಿ ಅಡಿಗೆ (4)
9. ಪಕ್ಷದ ಕೆಲಸವೆಂದು ಹೇಳುತ್ತಲೇ ಸಮಯ ಕಳೆಯುವುದೇ ? (4)
10. ವ್ಯಾಪಾರವನ್ನು ಕುದುರಿಸಲು ಹೊಸದೊಂದು ತಂತ್ರ (4)
12. ಸುಂದರ ಲಾಂಛನವನ್ನು ಕಂಡು ಆನಂದಿಸಲು ಕಣ್ಣು ಬೇಕು (3)
14. ರಮ್ಯ ವೇಷಧಾರಿಯಾಗಿ ಬಂದಿದ್ದಾನೆ ಲಕ್ಷ್ಮೀಪತಿ (3)
15. ಮರ್ಕಟದಂತೆ ವರ್ತಿಸುವುದುತುಂಬ ಅಪಾಯಕರ (3)
16. ನಕ್ಷತ್ರಗಳ ಸಂಖ್ಯೆಯಲ್ಲಿ ನಿರ್ದಿಷ್ಟತೆ ಹೇಗೆ (3)

### 26-10-2017ರ ಉತ್ತರಗಳು

ಎಡದಿಂದ ಬಲಕ್ಕೆ: 1.ಸಮಂಜಸ 3.ವರ್ದಮಾ (= ಮಾರ್ದವ ಹಿಂದುಮುಂದು ) 4.ರೋಚಕ 6.ನಗರಾಜ 7.ಪರಿಕರ 9. ಪ್ರಕಟಿಸು 11. ವಿನೂತನ 13.ರಮಾಪತಿ 15. ಅಂಬಾಸುತ 17.ನಸುಕು 18.ರಂಜನಿ 19. ಶರವೇಗ

ಮೇಲಿಂದ ಕೆಳಕ್ಕೆ: 1.ಸಮಾನ 2.ಸರೋಜ 3.ವಣಿಕ 5.ಕನಕ 7.ಪಲ್ಲವಿ 8. ರಸನ 9. ಪ್ರಹಾರ 10.ಸುಮತಿ 12.ತಪನ 14. ಮಾರ್ದನಿ 15. ಅಂಕುಶ 16. ತರಂಗ

# ಹೌಲರ್ ಮಂಗ: ಏನು ವಿಶೇಷ ?

ಹೆಸರೇ ಸೂಚಿಸುವಂತೆ ಭಾರೀ ಧ್ವನಿ ತೆಗೆದು ಅರಚುವುದು ಈ ಮಂಗದ ಮೊದಲ ವಿಶೇಷ. ವಾಸ್ತವ ಏನೆಂದರೆ ಧರೆಯ ಸಕಲ ನೆಲ ವಾಸಿ ಪ್ರಾಣಿಗಳಲ್ಲೂ ಹೌಲರ್ ಮಂಗದಷ್ಟು ದೊಡ್ಡ ಧ್ವನಿ ಬೇರಾವ ಪ್ರಾಣಿಗೂ ಇಲ್ಲ. ಹೌಲರ್ ನ ಅರಚಾಟದ ಶಬ್ದದ ತೀವ್ರತೆ ಎಷ್ಟೆಂದರೆ ಅದರ ನೈಸರ್ಗಿಕ ನೆಲೆಯಾದ ನಿಬಿಡ ವೃಷ್ಟಿ ವನದಲ್ಲೂ ಅದರ ಧ್ವನಿ ಐದು ಕಿಲೋ ಮೀಟರ್ ದೂರದವರೆಗೂ ಕೇಳಿಸುತ್ತದೆ !

'ಹೊಸ ಜಗತ್ತಿನ ಮಂಗ'ಗಳಲ್ಲೆಲ್ಲ – ಎಂದರೆ, ಮಧ್ಯ ಮತ್ತು ದಕ್ಷಿಣ ಅಮೆರಿಕದ ಮಂಗಗಳಲ್ಲೆಲ್ಲ – ಅತ್ಯಂತ ದೊಡ್ಡ ಗಾತ್ರದ ಮಂಗವಾಗಿರುವುದು ಹೌಲರ್‌ನ ಮತ್ತೊಂದು ವಿಶೇಷ. ವಯಸ್ಕ ಹೌಲರ್ ಗಂಡು ಮಂಗಗಳು ಮೂರು ಅಡಿ ಉದ್ದ ಇದ್ದು ಹತ್ತು ಕಿಲೋ ತೂಗುತ್ತವೆ. ಹೆಣ್ಣು ಮಂಗಗಳು ಎಂಟು ಕಿಲೋ ತೂಗುತ್ತವೆ. ಭಾರೀ ಉದ್ದದ ಬಾಲ ಪಡೆದಿರುವುದೂ ಈ ಮಂಗಗಳ ಇನ್ನೊಂದು ವಿಶೇಷ. ಶರೀರದ ಉದ್ದದ ಗರಿಷ್ಠ ಐದು ಪಟ್ಟು ಉದ್ದದ ಬಾಲ ಪಡೆದಿರುವ ಈ ಮಂಗಗಳ ದಾಖಲೆ ಇದೆ. ಹೊಸ ಜಗತ್ತಿನ ಜೇಡ ಕೋತಿ, ಉಣ್ಣೆ ಮಂಗ ಇತ್ಯಾದಿಗಳಂತೆಯೇ ಹೌಲರ್ ಮಂಗಗಳ ಬಾಲವೂ 'ಐದನೆಯ ಹಸ್ತ'ದಂತೆ ಕೊಂಬೆ ರಂಬೆಗಳನ್ನು ಭದ್ರವಾಗಿ ಹಿಡಿಯಬಲ್ಲ ಸಾಮರ್ಥ್ಯವನ್ನು ಪಡೆದಿದೆ.

ಮಧ್ಯ ಮತ್ತು ದಕ್ಷಿಣ ಅಮೆರಿಕದ ಅತ್ಯಂತ ನಿಬಿಡ ಮಳೆ ಕಾಡುಗಳಲ್ಲಷ್ಟೇ ಹೌಲರ್ ಮಂಗಗಳ ವಾಸ್ತವ್ಯ. ಇವು ಗುಂಪಾಗಿ ಬದುಕುತ್ತವೆ. ಒಂದು ಗುಂಪಿನಲ್ಲಿ ಹನ್ನೆರಡರಿಂದ ಹದಿನೈದರಷ್ಟು ಮಂಗಗಳು ಇರುತ್ತವೆ. ವೃಕ್ಷಗಳ ಮುಗಿಲೆತ್ತರದ ಚಾವಣಿಯಲ್ಲಿ ಬದುಕು ನಡೆಸುವ ಹೌಲರ್‌ಗಳಲ್ಲಿ ಹದಿನೈದು ಪ್ರಭೇದಗಳಿವೆ ( ಎರಡು ಪ್ರಭೇದಗಳನ್ನು ಚಿತ್ರಗಳಲ್ಲಿ ಗಮನಿಸಿ ). ಪ್ರತಿ ಗುಂಪಿನ ಎಳೆಯ ಮಂಗಗಳು ಪ್ರೌಢಾವಸ್ಥೆಗೆ ಬರುವ ಮೊದಲೇ ಇತರ ಗುಂಪುಗಳಿಗೆ ವಲಸೆ ಹೋಗಿ ಅಲ್ಲೇ ನೆಲೆಸುತ್ತವೆ. ಈ ಕ್ರಮ ಹೌಲರ್‌ಗಳ ಮತ್ತೊಂದು ವಿಶೇಷ. ಈ ಮಂಗಗಳಿಗೆ ಉತ್ತಮ ವರ್ಣದೃಷ್ಟಿ ಇದೆ. ಅವುಗಳ ಘ್ರಾಣ ಶಕ್ತಿಯಂತೂ ಅತ್ಯಂತ ಸೂಕ್ಷ್ಮ. ಎಷ್ಟೆಂದರೆ, ತಮ್ಮ ಆಹಾರದ ಅಸ್ತಿತ್ವ ಮತ್ತು ಶತ್ರುಗಳ ಆಗಮನವನ್ನು ಅವು ಎರಡು ಕಿಲೋ ಮೀಟರ್ ದೂರದಿಂದಲೇ ವಾಸನೆಯಿಂದಲೇ ಗ್ರಹಿಸುತ್ತವೆ ! ವೃಕ್ಷಗಳ ಚಿಗುರೆಲೆಗಳು, ಹೂಗಳು, ಮೊಗ್ಗುಗಳು ಮತ್ತು ಹಣ್ಣುಗಳು ಅವುಗಳ ಪ್ರಧಾನ ಆಹಾರ. ಜೊತೆಗೆ ಹಕ್ಕಿಗಳ ಮೊಟ್ಟೆಗಳು ಕೂಡ. ಹೌಲರ್‌ಗಳ ಸೋಜಿಗದ ವೈಶಿಷ್ಟ್ಯ ಏನೆಂದರೆ ಪ್ರತಿ ನಿತ್ಯ ಮುಂಜಾನೆ ಮತ್ತು ಸಂಜೆ ತಪ್ಪದೆ ಮತ್ತು ಉಳಿದ ವೇಳೆಯಲ್ಲಿ ಆಗಾಗ ಪ್ರತಿ ಗುಂಪಿನ ಗಂಡುಗಳು ಒಟ್ಟಾಗಿ ಕುಳಿತು ದೀರ್ಘ ಕಾಲ 'ಸಾಮೂಹಿಕ ಅರಚಾಟ' ನಡೆಸುತ್ತವೆ ! ತಮ್ಮ ಗುಂಪಿನ ಸರಹದ್ದನ್ನು ದೂರ ದೂರದ ಇತರ ಗುಂಪುಗಳಿಗೆ ತಿಳಿಸಲು ಈ ಕ್ರಮ. ಹೌಲರ್‌ಗಳ ಆಯುಷ್ಯ ಹದಿನೈದರಿಂದ ಇಪ್ಪತ್ತು ವರ್ಷ.




'ವನ್ಯ ಮಾಂಸ' ಕ್ಕಾಗಿ ಮತ್ತು 'ಸಾಕು ಪ್ರಾಣಿ ದಂಧೆ' ಗಾಗಿ ಹೌಲರ್ ಗಳು ಭಾರೀ ಸಂಖ್ಯೆಯಲ್ಲಿ ಮನುಷ್ಯರಿಗೆ ಬಲಿಯಾಗುತ್ತಿವೆ. ಅದು ಅವುಗಳ ಒಂದು ದುರಂತ ವಿಶೇಷ.

■ ಎನ್. ವಾಸುದೇವ್